- 'ನೇಮಿಚಂದ್ರ' ಎಂದಾಕ್ಷಣ ಕನ್ನಡ ಕಾವ್ಯ ಪರಂಪರೆಯಲ್ಲಿ 'ಲೀಲಾವತೀ ಪ್ರಬಂಧ' ಕೃತಿ ಬರೆದ ಜೈನ ಕವಿ ನೇಮಿಚಂದ್ರ ನೆನಪಾಗುತ್ತಾನೆ. ಹೆಣ್ಣುಮಕ್ಕಳಲ್ಲಿ ಈ ಹೆಸರು ಅಪರೂಪ. ನಿಮ್ಮ ಹೆಸರಿನ ಹಿನ್ನೆಲೆ ಏನು?

ನನ್ನ ತಂದೆ ಜಿ. ಗುಂಡಣ್ಣ, ಕನ್ನಡದ ಪ್ರೊಫೆಸರ್ ಮತ್ತು ಲೇಖಕರು. ಜೈನ ಪರಂಪರೆಯಿಂದ ಪ್ರಭಾವಿತರಾದ ಅವರು 'ಆದಿ ಜಿನ ತನಯರು' ಎಂಬ ನಾಟಕವನ್ನೂ ಬರೆದರು. ಕವಿ ನೇಮಿಚಂದ್ರನ ಕೃತಿಗಳನ್ನು ಅಧ್ಯಯನ ಮಾಡಿದವರು. ನಾನು ಹುಟ್ಟಿದಾಗ, ಜಾತಕದಲ್ಲಿ 'ನೇ' ಅಕ್ಷರದಿಂದ ಹೆಸರು ಆರಂಭವಾಗಬೇಕು ಎಂದೇನೋ ಹೇಳಿದರು ಎಂದ ತಕ್ಷಣ ನನಗೆ ನೇಮಿಚಂದ್ರ ಎಂದು ಹೆಸರು ಕೊಟ್ಟರು. ಅನೇಕ ಓದುಗರು ನನ್ನನ್ನು ಮೊದಲ ಬಾರಿ ಭೇಟಿಯಾದಾಗ 'ನೇಮಿಚಂದ್ರ ಎಂದರೆ ಗಂಡಸು ಎಂದುಕೊಂಡಿದ್ದೆ' ಎಂದೇ ಮಾತು ಆರಂಭಿಸುತ್ತಾರೆ.

- ಕತೆ, ಕಾದಂಬರಿ, ಅನುವಾದ, ಜೀವನ ಚರಿತ್ರೆ, ಪ್ರವಾಸ ಕಥನ, ವಿಚಾರ ಸಾಹಿತ್ಯ – ಇಷ್ಟೆಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಬರೆಯುತ್ತಾ ಬಂದಿದ್ದೀರಿ. ಈ ಪ್ರಕಾರಗಳ ಜಿಗಿತ ನಿಮ್ಮ ಪ್ರಕಾರ ಸಹಜವೋ ಅನಿವಾರ್ಯವೋ? ನಿಮ್ಮ ಎಲ್ಲ ಬರವಣಿಗೆಯನ್ನು ಒಟ್ಟಾಗಿ ನೋಡಿದರೆ, ನಿಮ್ಮ ಮುಖ್ಯ ಕಾಳಜಿ ಕತೆ ಹೇಳುವುದು. ಕತೆ ಹೇಳುವುದು ನಿಮಗೆ ಎಷ್ಟು ಅನಿವಾರ್ಯ?

> ನನ್ನ ಬದುಕು–ಬರಹಗಳ ಮೇಲೆ ಪ್ರಭಾವ ಬೀರಿರುವುದು ಸ್ತ್ರೀವಾದ ಮತ್ತು ಅದರ ವಿಸ್ತರಣೆಯಾದ ಜಾತಿ, ಧರ್ಮ, ಲಿಂಗ, ವರ್ಗಗಳ ಭೇದವಿಲ್ಲದ ಮಾನವತಾವಾದ.

ಕತೆ ಹೇಳುವ, ಕತೆ ಬರೆಯುವ ಅನಿವಾರ್ಯತೆ ನನಗಿದೆ. ನನ್ನೊಳಗೇ ಕಾಡಿದ ವಿಷಯಗಳ ಸ್ಪಷ್ಟತೆಗೆ, ಒಳಗೊಳಗೆ ಗಸ್ತು ಹೊಡೆದು ಕದಡಿದ ವಿಚಾರಗಳ ಉಚ್ಚಾಟನೆಗೆ ನಾನು ಕತೆ ಬರೆಯಲು ತೊಡಗುತ್ತೇನೆ. ಬರೆದಂತೆ ನನ್ನನ್ನು ನಾನು ಕಂಡುಕೊಳ್ಳುವುದು ಸಾಧ್ಯವಾಗಿದೆ. ವಿಚಾರಗಳು ಸ್ಪಷ್ಟವಾಗಿವೆ. ಬರಹ ಸ್ವಅನ್ವೇಷಣೆಯ ಸಾಧನವಾಗಿದೆ.

ವಿಜ್ಞಾನ, ಸಾಹಿತ್ಯ, ಮಹಿಳಾ ಅಧ್ಯಯನ, ಪ್ರವಾಸ – ಇವೆಲ್ಲವೂ ನನ್ನ ಉತ್ಕಟ ಆಸಕ್ತಿ ಮತ್ತು ಅಧ್ಯಯನದ ವಿಷಯಗಳಾದ ಕಾರಣ, ಹಲವು ಪ್ರಕಾರಗಳ ಬರವಣಿಗೆ ನನಗೆ ಸಹಜವೂ ಹೌದು, ಅನಿವಾರ್ಯವೂ ಹೌದು. ನಾನು ಇಂತಹದೇ ಪ್ರಕಾರದಲ್ಲಿ ಬರೆಯಬೇಕು ಎಂದು ಉದ್ದೇಶ ಪೂರ್ವಕವಾಗಿ ಹೊರಟಿದ್ದಲ್ಲ. ನಾನು ಇಲ್ಲಿಯವರೆಗೂ ಬರೆದಿರುವುದು ಒಂದೇ ಕಾದಂಬರಿ, 'ಯಾದ್ ವಶೇಮ್' ಮಾತ್ರ. ಮೊದಲಿಗೆ ಅದು 'ನೂರು ಸಾವಿರ ಸಾವಿನ ನೆನಪು' ಹೆಸರಿನಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೂಡಿಬಂದಿತ್ತು. ಕಾದಂಬರಿ ಬರೆಯಲೇಬೇಕೆಂಬ ಹಟ ನನಗಿರಲಿಲ್ಲ. ಹೊಳೆದ ವಸ್ತು ಅಥವಾ ವಿಷಯ, ತನಗೆ ಬೇಕಾದ ಪ್ರಕಾರವನ್ನು ಆಯ್ದುಕೊಳ್ಳುತ್ತದೆ.

ಕತೆ ಹೇಳುವುದು ನನ್ನ ಮುಖ್ಯ ಕಾಳಜಿ. ಒಂದು ಸಕಾರಾತ್ಮಕ ಕತೆಗಾಗಿ, ಓರ್ವ ಪಾಸಿಟಿವ್ ವ್ಯಕ್ತಿಯ ಭೇಟಿಗಾಗಿ ನಾನು ಎಷ್ಟು ದೂರ ಬೇಕಾದರೂ ಹೋಗಬಲ್ಲೆ. ನನಗೆ ಸ್ಫೂರ್ತಿಯಾದ ಪ್ರೇರಣೆಯಾದ ಇವರೆಲ್ಲರ ಕತೆಗಳನ್ನು ಬರೆಯಲೇಬೇಕಾದ ಅನಿವಾರ್ಯ ನನಗಿದೆ. 'ಹಾಡುವುದು ಅನಿವಾರ್ಯ ಕರ್ಮ ನನಗೆ' ಎಂದು ಕವಿ ಹಾಡಿದಂತೆ, 'ಕತೆ ಹೇಳುವುದು ಅನಿವಾರ್ಯ ಧರ್ಮ ಮತ್ತು ಕರ್ಮ ನನಗೆ'.